ಕೊಡುವಂತೆಯೇ ಇರಲಿಲ್ಲ. ಹೀಗಾಗಿ ಅವರು ಒಳಗೆ ಬಂದರು ಎಂದರೆ, ಮಾತು ಬಂದಾಗಿ ಮೂಲೆ ಸೇರುತ್ತಿತ್ತು. ಅವರಿಗೆ ತೋಟದ ಕುರಿತು ಚಲೋ ಗೊತ್ತಿತ್ತು. ಸಣ್ಣದ್ದಾಗ ಎಲ್ಲ ಕೆಲಸವನ್ನೂ ಮಾಡಿದ್ದರಂತೆ. ಸಿಟ್ಟೂ ಹಾಗೆಯಾ. ಹಿಂದೊಮ್ಮೆ, ತೋಟದ ತುಂಬ ಅಡಿಕೆ ಮರಕ್ಕೆ ವೀಳ್ಯದ ಎಲೆ ಬೆಳೆಸಿದ್ದರಂತೆ. ಅದನ್ನು ಕೊಯ್ದು, ಸಾಕಿ, ಪೊಟ್ಟಲೆ ಹಾಕಿ ಮಾರಲು, ಲಾಂಚಿನ ಮೇಲೆ ಹೊನ್ನಾವರಕ್ಕೆ ಒಯ್ದಿದ್ದರಂತೆ. ಅಲ್ಲಿ ಲಾಂಚಿನ ಬಂದರಿನಲ್ಲಿ ಅಗ್ಗಾಸುಗ್ಗಿಗೆ ಕೇಳಿದರಂತೆ, ವ್ಯಾಪಾರಸ್ಥರು. ಎಲೆ ಪೊಟ್ಟಲೆ ತೆಗೆದು ಹೊಳೆಗೆ ಎಸೆದು, ಮನೆಗೆ ಬಂದವರೇ ರಾತ್ರೋ ರಾತ್ರಿ ತೋಟಕ್ಕೆ ಹೋಗಿ, ಅಷ್ಟೂ ಬಳ್ಳಿ ಬುಡ ಕತ್ತರಿಸಿ ಬಂದಿದ್ದರಂತೆ. ನಂತರ, ಸುಮಾರು ವರ್ಷದ ಮೇಲೆ ಮತ್ತೆ ಎಲೆ ಬಳ್ಳಿ ಹಾಕಿದ್ದು.

ಈಗಲೂ ಅದೇ ಜಾಪು ಇದ್ದರೂ, ಒಳಗೆ ಟೊಳ್ಳಾಗಿತ್ತು.

ಹಿರಿಯ ಮಗ ಶಾಂತಾರಾಮ ಅಪ್ಪನ ದೊಸ್ತ ಶಿವನನ್ನು ಪಂಚಾಯ್ತಿಗೆ ಕರೆದಿದ್ದ. ಅಪ್ಪನಿಗೆ ಊರಲ್ಲಿರುವ ಯಾರನ್ನಾದರೂ ಹಾಗೆ ಇಂತಹ ವಿಷಯಗಳಿಗೆ ಕರೆದು ತರುವ ಹಾಗಿಲ್ಲ. ಯಾರನ್ನು ಕಂಡರೂ ಅಷ್ಟಾಗಿ ಆಗುತ್ತಿರಲಿಲ್ಲ. ಆಗುವವರು ಒಬ್ಬೊಬ್ಬರಾಗಿ ಸಂಪರ್ಕ ಬಿಟ್ಟಿದ್ದರು. ಚುನಾವಣೆಯಲ್ಲಿ ತಾನಿದ್ದ ಪಕ್ಷ ಬಿಟ್ಟು ಬೇರೆ ಪಕ್ಷಕ್ಕೆ ಕೆಲಸ ಮಾಡಿದರು ಎಂದು ಹೆಗಡೆಯವರಿಗೆ ಕೆಲವು ವೈರಿಗಳು ಹುಟ್ಟಿಕೊಂಡಿದ್ದರು. ಅವರಿಗೆ ವಿಪರೀತವಾಗಿ ತನ್ನನ್ನು ತಾನು ಹೊಗಳಿಕೊಳ್ಳುವ ಚಾಳಿಯೂ ಇತ್ತು. ಅದು ಅವರು ದರ್ಬಾರು ಮಾಡುವ ಕಾಲದಲ್ಲಿ ನಡೆಯುತ್ತಿತ್ತು. ಅವರ ಸುತ್ತ ಇರುವವರು 'ಹಾ ಹೂ' ಅನ್ನುತ್ತ ಕೇಳುತ್ತಿದ್ದರು. ಈಗ, 'ಬ್ಯಾಜಾರ ಬತ್ತು ಮಾರಾಯಾ, ಅವನು ಹೇಳದ್ದೆ ಹೇಳ್ತಾ' ಎನ್ನುತ್ತಿದ್ದರು. ಆದರೆ ಈ ದೊಸ್ತ ಮಾತ್ರ ಇನ್ನೂ ಉಳಿದಿದ್ದ. ಅವನು ಪಕ್ಕದ ಮನೆಯವರ ನೆಂಟ. ಶಿವನ ಎದುರು ಮನೆಯ ಖಾಸಗಿ ಸಂಗತಿಗಳು ಒಂದೊಂದಾಗಿ ಹೊರಬೀಳತೊಡಗಿದವು. ಕಿರಿಯವ ಶಂಭು ಒಂದು ನಮೂನೆಯ ಸಂಕೋಚ, ಆತಂಕದಿಂದ ಮೆತ್ತಿಯ ಮೇಲೆ ಓದುವ ನಟನೆ ಮಾಡುತ್ತ ಕೂತಿದ್ದ. ಅವನನ್ನು ಕೆಳಗೆ ಕರೆಯಲಾಯಿತು.

'ನಿನ್ನ ಅಭಿಪ್ರಾಯವೇನು?'

'.....'

'ಸುಮ್ಮನಿದ್ದರೆ ಆಗುವುದಿಲ್ಲ'

'.....'

ಶಂಭು ಪೆಕ್ರನ ಹಾಗೆ ಕುಳಿತ. ಹಿರಿಯ ಮಗ ಶಾಂತಾರಾಮನೂ ಸುಮ್ಮನಿದ್ದ. ಉಳಿದವರೂ ಸುಮ್ಮನೆ ಕೂತಿದ್ದರು. ಹೆಗಡೆಯವರು ಅದೆ ಅದೇ ವಿತಂಡ ವಾದ ಮಾಡುತ್ತಿದ್ದರು; 'ನಾ ಮಾಡಿದ್ದು ನಾ ಖರ್ಚು ಮಾಡುತ್ತೇನೆ. ನನಗೆ ಯಾರೂ ಒಂದು ಪೈಸವನ್ನೂ ಕೊಟ್ಟಿಲ್ಲ...'

'ಅದೆಲ್ಲ ಹೌದಯ್ಯ, ಅದನ್ನು ಅಲ್ಲ ಅಂದವರು ಯಾರು? ಆದರೆ ಈಗ ಹೀಗೆ ಮಾಡುವುದು ಸರಿಯೆ? ಮುಂದೆ ಮನೆಗೆ, ಮನೆಯವರಿಗೆ ಏನು ಮಾಡಬೇಕೆಂದು ನೋಡಬೇಕಲ್ಲ' ಎಂದು ಅವರ ದೋಸ್ತ ಶಿವ ಯೋಗ್ಯಶೀರು ಹೇಳಿದ.

'ಇದನ್ನೆಲ್ಲ ಇವರಿಗೆ ಒಪ್ಪಿಸಿ ನಾ ಮನೆ ಬಿಟ್ಟು ಹೋಗ್ತೇನೆ, ನನ್ನಿಂದ ಇವಕ್ಕೆಲ್ಲ ತೊಂದರೆ ಹೇಳಾದರೆ ನಾನು ಯಾಕೆ ಇರಬೇಕು' ಎಂದು ಹೆಗಡೆಯವರು ಹೊಸ ರಾಗ ತೆಗೆದರು. ಮಾತಿಗೆ ಮಾತು ಆಡುತ್ತಿರಲಿಲ್ಲ. ಏನೇನೊ ಹೇಳುತ್ತಿದ್ದರು. ಶಂಭು, ಶಾಂತಾರಾಮರಿಗೆ ಅಸಯ್ಯ ಎನಿಸತೊಡಗಿತು. ಇವನಿಗೆ ಹುಚ್ಚು ಹಿಡಿದಿರಬೇಕು, ಬೇರೆಯವರ ಮನೆಯ ಪಂಚಾಯ್ತಿ ಮಾಡುವವ, ಅವರ ಸರಿ ತಪ್ಪುಗಳನ್ನು ಹೇಳುವವ ಇಲ್ಲಿ ಈ ನಮೂನೆ ಉರೂಟಾಗಿ